ಕರ್ನಾಟಕ ವಿಧಾನಸಭೆ

ಬುಧವಾರ 07ನೇ ಆಗಸ್ಟ್ 1996ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) : ಅವರು ಪೀಠವನ್ನು ಅಲಂಕರಿಸಿದ್ದರು.

---

1. ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ:- ಕಾವೇರಿ ನದಿ ನೀರಿನ ಹಂಚಿಕೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿರತಕ್ಕ ಸುದ್ದಿಯನ್ನು ನಾವು ನೋಡಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ತಮಿಳುನಾಡಿಗೆ ಹೋಗಿದ್ದಾರೆ. ಆದ್ದರಿಂದ ಪ್ರಶ್ನೋತ್ತರವನ್ನು ಬದಿಗೊತ್ತಿ ಪ್ರಾಮುಖ್ಯವಾದ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ರಾಜ್ಯಕ್ಕೆ ಬಹಳ ಅನ್ಯಾಯ ಆಗಿದೆ ಎಂಬುದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ನಮಗೆ ಅತ್ಯಂತ ನೋವಾಗಿದೆ. ಇದು ಪ್ರಶ್ನೋತ್ತರಕ್ಕಿಂತ ಬಹಳ ಪ್ರಾಮುಖ್ಯವಾದುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ತಮಿಳುನಾಡಿಗೆ ಮುಖ್ಯ ಮಂತ್ರಿಗಳು ಹೋಗಿದ್ದರ ಬಗ್ಗೆ ನಾನು ನಿಮಗೆ ಹೇಳಿದ್ದೇನೆ. ಅಲ್ಲಿ ಏನು ಮಾತುಕತೆ ಆಯಿತು ಸರ್ಕಾರ ಏನು ಒಪ್ಪಿಕೊಂಡು ಬಂದಿದೆ, ಆದರ ಬಗ್ಗೆ ಅವರು ರಿಪ್ಲೈ ಮಾಡಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:- ಅವರು ಮಾತಾನಾಡುವುದಕ್ಕೆ ಯಾರನ್ನೂ ಕರೆಯಲಿಲ್ಲ. ಅವರ ಸೂತ್ರಗಳು ಏನು? ಸರ್ಕಾರಕ್ಕೆ ಏನಾಗಿದೆ? ನಾನು ನೋವಿನಿಂದ ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಸರ್ಕಾರ ಮಾಡಿರತಕ್ಕಂತಹ ಒಂದು ಅಪಚಾರ ಎಂದು ಅತ್ಯಂತ ನೋವಿನಿಂದ ಈ ಮಾತು ಹೇಳು-ತ್ತಿದ್ದೇನೆ. ಕರ್ನಾಟಕಕ್ಕೆ ಆಗಿರತಕ್ಕಂತಹ ಅನ್ಯಾಯ, ಇದು ಆಗಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪ್ರಶ್ನೋತ್ತರ ವೇಳೆ ಆದ ಮೇಲೆ ತಾವು ತೆಗೆದುಕೊಳ್ಳು-ತ್ತೀರಿ ಎಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ, ಅದನ್ನು ಈಗಂತೂ ತೆಗೆದುಕೊಳ್ಳುವುದಿಲ್ಲ ಎಂದು ಕಾಣುತ್ತದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಪ್ರಶ್ನೋತ್ತರಗಳು

2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ಟಿ.ಸಿ.ಹೆಚ್. ಸೀಟುಗಳ ಹಂಚಿಕೆ.

331(2308) **ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ):-** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಟಿ.ಸಿ.ಹೆಚ್. ಕಾಲೇಜಿನಲ್ಲಿ ಆಡಳಿತ ಮಂಡಳಿಗೆ ಶೇಕಡ ಎಷ್ಟು ಸೀಟುಗಳು ಮೀಸಲಾತಿ ಇಡಲಾಗುತ್ತಿದೆ; ಸರ್ಕಾರದ ವತಿಯಿಂದ ಶೇಕಡ ಎಷ್ಟು ಹಂಚಿಕೆ ಮಾಡಲಾಗುವುದು?

ಆ) ಸರ್ಕಾರದಿಂದ ಹಂಚಿಕೆಯಾದ ಅಭ್ಯರ್ಥಿಗಳಿಗೆ ಖಾಸಗಿ ಕಾಲೇಜಿನಲ್ಲಿ ಎಷ್ಟು ಶುಲ್ಕ ನಿಗದಿಪಡಿಸಲಾಗಿದೆ ಸರ್ಕಾರಿ ಕಾಲೇಜಿನಲ್ಲಿ ಎಷ್ಟು ಶುಲ್ಕ ನಿಗದಿಪಡಿಸಲಾಗಿದೆ, ವಿವರಗಳನ್ನು ಕೊಡಿ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಆಡಳಿತ ಮಂಡಳಿ ಹಾಗೂ ಸರ್ಕಾರಿ ಸೀಟುಗಳ ಶೇಕಡಾವಾರು ವಿವರಗಳು ಕೆಳಕಂಡಂತೆ ಇರುತ್ತದೆ.

	ಆಡಳಿತ ಮಂಡಳಿ ಸೀಟುಗಳು ಶೇಕಡ	ಸರ್ಕಾರಿ ಸೀಟುಗಳು ಶೇಕಡ
ಅನುದಾನಿತ ಖಾಸಗಿ ಟಿ.ಸಿ.ಹೆಚ್. ಕಾಲೇಜುಗಳು	25	75
ಅನುದಾನಿತ ಖಾಸಗಿ ಅಲ್ಪ ಸಂಖ್ಯಾತ ಸಂಸ್ಥೆಯ ಟಿ.ಸಿ.ಹೆ.ಚ್. ಕಾಲೇಜುಗಳು	35	65
ಅನುದಾನ ರಹಿತ ಸಾಮಾನ್ಯ ಹಾಗು ಅಲ್ಪಸಂಖ್ಯಾತ ಟಿ.ಸಿ.ಹೆಚ್. ಕಾಲೇಜುಗಳು	50	50

ಆ)

	ಬೋಧನಾ ಶುಲ್ಕ ರೂ.ಗಳಲ್ಲಿ	ಇತರೆ ಶುಲ್ಕ ರೂ.ಗಳಲ್ಲಿ
ಅನುದಾನಿತ ಖಾಸಗಿ ಕಾಲೇಜು	1500	575
ಅನುದಾನ ರಹಿತ		

ಖಾಸಗಿ ಕಾಲೇಜು	3000	575
ಸರ್ಕಾರಿ ಕಾಲೇಜು	750	575

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸನ್ಮಾನ್ಯ ಅಧ್ಯಕ್ಷರೆ, ಖಾಸಗಿ ಟಿ.ಸಿ.ಹೆಚ್. ಕಾಲೇಜಿಗೆ, ಆಡಳಿತ ಮಂಡಳಿಯವರಿಗೆ ಇರುವ ಕೋಟ ಎಷ್ಟು? ಮತ್ತು ಸರ್ಕಾರಿ ಕೋಟ ಎಷ್ಟು ಎಂದು ಕೇಳಿದ್ದೇನೆ, ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಆದರೆ ಅನುದಾನದ ಖಾಸಗಿ ಕಾಲೇಜುಗಳಿಗೆ ಬೋಧನ ಶುಲ್ಕ 1,500 ರೂಪಾಯಿಯೆಂದು ಕೊಟ್ಟಿದ್ದಾರೆ. ಇತರ ಶುಲ್ಕ 575 ರೂಪಾಯಿ ಎಂದು ಕೊಟ್ಟಿದ್ದಾರೆ. ಈ ಶುಲ್ಕ ಆರು ತಿಂಗಳಿಗೋ ಅಥವಾ ವರ್ಷಕ್ಕೊ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಇವತ್ತು ನೇಮಕಾತಿ ರಾಜ್ಯ ಮಟ್ಟದಿಂದ ನಡೆಯುವುದರಿಂದ ಕೊಡಗಿನ ಮಕ್ಕಳಿಗೆ ಕೋಲಾರದಲ್ಲಿ, ಶಿವಮೊಗ್ಗದಲ್ಲಿ ಟಿ.ಸಿ.ಹೆಚ್. ಸೀಟ್ ಸಿಗುವ ಪರಿಸ್ಥಿತಿ ಆಗಿದೆ. ಹಾಗೆ ಆದಾಗ ಅವರಿಗೆ ಅಲ್ಲಿ ಹಾಸ್ಟೆಲ್ ಫೆಸಿಲಿಟೀಸ್‌ಗೆ ತೊಂದರೆಯಾಗುತ್ತದೆ. ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರೋ? ಆಯಾ ಜಿಲ್ಲೆಯವರಿಗೆ ಪ್ರಾತಿನಿಧ್ಯ ಕೊಡುತ್ತೀರೋ ಎಂಬುದನ್ನು ತಿಳಿಸಬೇಕು. ಶೇಕಡ 25 ಕೊಟ್ಟಿದ್ದರಿಂದ ಇವತ್ತು ಏನಾಗಿದೆ ಎಂದರೆ 35 ರಿಂದ 40 ಸಾವಿರ ರೂಪಾಯಿ ಡೊನೇಷನ್ ತೆಗೆದುಕೊಳ್ಳುವಂತಹ ಪರಿಸ್ಥಿತಿ ಏನಿದೆ ಅದನ್ನು ಯಾವ ರೀತಿ ತಡೆಗಟ್ಟುತ್ತೀರಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- 1,500 ರೂಪಾಯಿ ವರ್ಷಕ್ಕೆ ಒಬ್ಬ ವಿದ್ಯಾರ್ಥಿ ಕೊಡಬೇಕು. ತಮ್ಮ ಮೊದಲನೆ ಪ್ರಶ್ನೆಗೆ ಇದು ಕ್ಲ್ಯಾರಿಫಿಕೇಷನ್. ಒಂದು ಸಾರಿ ಅಡ್ಮಿಷನ್ ರೂ. 15,000 ಮತ್ತು 575 ರೂಪಾಯಿ ಆಗುವಾಗ ಅವರು ಕೊಡಬೇಕಾಗಿರುತ್ತದೆ. ಇನ್ನು ಎರಡನೆಯದಾಗಿ ಅನೇಕ ಪ್ರದೇಶಗಳಲ್ಲಿ ಟಿ.ಸಿ.ಹೆಚ್. ಕಾಲೇಜುಗಳು ಇಲ್ಲ. ಆ ಕಡೆ ಬಹಳ ತೊಂದರೆಯಾಗುತ್ತಿದೆ ಎಂದು ಹೇಳಿದರು. ಇದು ಬಹಳ ವರ್ಷಗಳಿಂದ ಇದೇ ರೀತಿ ಆಗಿದೆ. ಉದಾಹರಣೆಗೆ ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ಮತ್ತು ಮೂಡಿಗೆರೆ ಇಷ್ಟೆ ಅಲ್ಲಾ ಎಲ್ಲಾ ಕಡೆನೂ ಈ ರೀತಿ ತೊಂದರೆಗಳು ಇರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಸಧ್ಯದ ಪರಿಸ್ಥಿತಿಯಲ್ಲಿ ನಾವು ಎಲ್ಲೂ ಟಿ.ಸಿ.ಹೆಚ್. ಕೊಡುವುದಿಲ್ಲ. ಆದರಿಂದ ಅವರಿಗೆ ಸ್ವಲ್ಪ ತೊಂದರೆಯಾಗಿದೆ. ಸ್ವಲ್ಪ ದಿವಸ ಅವರು ನಮ್ಮ ಜೊತೆಯಲ್ಲಿ ಕಹಿ ಅನುಭವ ಅನುಭವಿಸಬೇಕು. ಆ ಮೇಲೆ ಎಲ್ಲೆಲ್ಲಿ ಅವಶ್ಯಕತೆ ಇದೆ ನೋಡಿ ಅದನ್ನೆಲ್ಲಾ ಪರಿಶೀಲನೆ ಮಾಡತಕ್ಕಂತಹ ವ್ಯವಸ್ಥೆ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸನ್ಮಾನ್ಯ ಅಧ್ಯಕ್ಷರೆ, ಕೋಲಾರದವರಿಗೆ ಕೊಡಗಿನಲ್ಲಿ ಕೊಟ್ಟರೆ ಅವರಿಗೆ ಹಾಸ್ಟೆಲ್ ಫೆಸಿಲಿಟೀಸ್ ಏನೂ ಇರುವುದಿಲ್ಲ. ಟಿ.ಸಿ.ಹೆಚ್.ಗೆ ಬರುವವರು ಹೆಚ್ಚಿಗೆ ಬಡವರ ಮಕ್ಕಳು ಇರುತ್ತಾರೆ. ಅವರಿಗೆ ಬಹಳ ತೊಂದರೆಯಾಗುತ್ತದೆ. ಆ ರೀತಿಯಿಂದ ಆಯಾಯಾ ಜಿಲ್ಲೆಯವರಿಗೆ ಪ್ರಾತಿನಿಧ್ಯ ಕೊಡುತ್ತೀರೋ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಯಾವುದೇ ರೀತಿಯಲ್ಲಿ ಯಾವ ಜಿಲ್ಲೆಯವರಿಗೂ ಯಾವ ತಾಲ್ಲೂಕಿನವರಿಗೂ ಅನ್ಯಾಯ ಆಗಬಾರದು ಎನ್ನತಕ್ಕಂತಹ ದೃಷ್ಟಿಯಿಂದ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ನಾವು ಈಗ ಅಲಾಟ್‌ಮೆಂಟ್ ಮಾಡಬೇಕಾದರೆ ಮೊದಲು ಹೈಯಸ್ಟ್ ಮಾರ್ಕ್ಸ್ ತೆಗೆದುಕೊಂಡಿರತಕ್ಕಂಥ ವಿದ್ಯಾರ್ಥಿಗಳು ಯಾರು ಇದ್ದಾರೆ ಅವರಿಗೆ ಅದೇ ಡಿಸ್ಟ್ರಿಕ್ಟ್‌ನಲ್ಲಿ ಕೊಡುತ್ತೇವೆ. ನೆಕ್ಸ್ಟ್ ಯಾರಿಗೆ ಕಡಿಮೆ ಬಂದಿದೆ ಅವರಿಗೆ ಪಕ್ಕದ ಜಿಲ್ಲೆಯಲ್ಲಿ ಕೊಡುತ್ತೇವೆ. ಪೂರ್ಣ ಕಡಿಮೆ ಅಂಕ ಬಂದವರಿಗೆ ಇನ್ನು ಸ್ವಲ್ಪ ದೂರದಲ್ಲಿ ಕೊಡತಕ್ಕಂತಹ ಒಂದು ಸಂಪ್ರದಾಯವನ್ನು ಹಾಕಿಕೊಂಡಿದ್ದೇವೆ. ಇದರಿಂದ ಹೆಚ್ಚು ಅನಾನುಕೂಲ ಆಗುತ್ತಿದೆ. ಸಧ್ಯದಲ್ಲಿ ತಾವು ಹೇಳತಕ್ಕಂತಹ ರೀತಿಯಲ್ಲಿ ಕೆಲವು ಬಡ ಮಕ್ಕಳಿಗೆ ತೊಂದರೆಯಾಗುತ್ತಿದೆ; ಅವರು 20, 25, 30,000 ರೂಪಾಯಿ ಕೊಟ್ಟು ಟಿ.ಸಿ.ಹೆಚ್. ಸೇರತಕ್ಕಂತಹ ಸಂಪ್ರದಾಯ ಏನಿತ್ತು ಅದನ್ನು ನಾವು ಸಂಪೂರ್ಣವಾಗಿ ತೆಗೆದು ಹಾಕಿ 75 ಭಾಗ ನಮ್ಮ ಸರ್ಕಾರದವರೇ ಫ್ರೀಯಾಗಿ ಕೊಡತಕ್ಕಂತಹ ವ್ಯವಸ್ಥೆ ಮಾಡಿರುವುದರಿಂದ ನೀವೆಲ್ಲಾ ಬಹಳ ಸಂತೋಷಪಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಏನಾದರೂ ಅನಾನುಕೂಲ ಆದಲ್ಲಿ, ಸ್ವಲ್ಪ ದಿವಸ ಅವರು ಸುಧಾರಿಸಿಕೊಂಡು ಕೆಲಸ ಮಾಡಬೇಕಾಗಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸರ್ಕಾರ ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚಿಗೆ ತೆಗೆದುಕೊಂಡರೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಇದನ್ನು ತಾವು ದಯವಿಟ್ಟು ನಮ್ಮ ಸರ್ಕಾರದ ಗಮನಕ್ಕೆ ತಂದರೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾರ ದಾಕ್ಷಿಣ್ಯವೂ ನಮಗೆ ಇಲ್ಲ. ಅಂತಹ ಸಂದರ್ಭದಲ್ಲಿ ಮುಚ್ಚತಕ್ಕ ವ್ಯವಸ್ಥೆಯನ್ನೇ ಮಾಡುತ್ತೇವೆ.

ಡಾ।। ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೇ, 1993ರಲ್ಲಿ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಒಂದು ಬಾರಿ ಪ್ರಥಮ ವರ್ಷದ ಪರೀಕ್ಷೆಗೆ ಕೂರಿಸಿದ್ದಾರೆ. ಆದರೆ ಎರಡನೇ ವರ್ಷದ ಪರೀಕ್ಷೆಗೆ ಅನುಮತಿ ಕೊಟ್ಟಿಲ್ಲ. ದಯಮಾಡಿ ಅದಕ್ಕೂ ಕೂಡ ಅವಕಾಶ ಮಾಡಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ತಮ್ಮ ಮುಖಾಂತರ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಪರೀಕ್ಷೆಗೆ ಕೂಡಿಸಿದ್ದೇವೆ, ರಿಸಲ್ಟ್ ಬಂದ ಮೇಲೆ ಅದಕ್ಕೆ ಪ್ರಾಕ್ಟಿಕಲ್ ಎಕ್ಸಾಮಿನೇಷನ್ ಆದ ಮೇಲೆ ಯಾರು ಪಾಸ್ ಆಗಿರುತ್ತಾರೆ ಅವರಿಗೆಲ್ಲಾ ಅಲಾಟ್‌ಮೆಂಟ್ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ರಿಸಲ್ಟ್ ಕೂಡ ಕೊಟ್ಟಿಲ್ಲ. ಆ ಮಕ್ಕಳು ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ. ಬೇರೆ ಕಡೆ ವಿದ್ಯಾಭಾಸ ಮಾಡುವುದಕ್ಕೆ ಕೂಡ ಅನಾನುಕೂಲವಾಗಿದೆ. ದಯಮಾಡಿ ಅದರ ಬಗ್ಗೆ ತಾವು ಉತ್ತರ ಕೊಡಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಅನಧಿಕೃತವಾದ ಶಾಲೆಗಳಲ್ಲಿ ಎರಡು ವರ್ಷಗಳ ಹಿಂದೆ ಪರೀಕ್ಷೆಗೆ ಕೂತಿದ್ದರೆ ಅದು ನಮಗೆ ಸಂಬಂಧ ಬರುವುದಿಲ್ಲ. ಕಳೆದ ವರ್ಷ ಪರೀಕ್ಷೆಗೆ ಕುಳಿತುಕೊಳ್ಳಿ ಎಂದು ನಾವು ಏನು ಆದೇಶ ಕೊಟ್ಟಿದ್ದೇವೆ ಅವರಿಗೆ ಮಾತ್ರ ಅವರು ಪರೀಕ್ಷೆಯಲ್ಲಿ ಪಾಸ್ ಆದ ಮೇಲೆ, ಪ್ರ್ಯಾಕ್ಟಿಕಲ್ ಆದ ಮೇಲೆ ಅವರಿಗೆ ನಮ್ಮ ಶಾಲೆಗಳಲ್ಲಿ ಅಲಾಟ್‌ಮೆಂಟ್ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕುಂಬ್ಳೆ ಸುಂದರ್ ರಾವ್:- ಮಾನ್ಯ ಅಧ್ಯಕ್ಷರೇ, ಟಿ.ಸಿ.ಹೆಚ್.ಗೆ ಸೇರುವ ವಿದ್ಯಾರ್ಥಿಗಳನ್ನು ಹಂತ ಹಂತವಾಗಿ ಕಡಿಮೆ ಅಂಕ ಇದ್ದವರನ್ನು ದೂರ ಕಳುಹಿಸುತ್ತೀರಿ ಎನ್ನುವ ನೀತಿ ನನಗೆ ಅರ್ಥವಾಗಿಲ್ಲ. ಪ್ರಥಮದಲ್ಲಿ ಹೆಚ್ಚು ಮಾರ್ಕ್ಸ್ ಇದ್ದವರಿಗೆ ನೀವು ಸೀಟು ಕೊಟ್ಟಮೇಲೆ ಅದರ ನಂತರದವರಿಗೆ ಬೇರೆ ಜಿಲ್ಲೆಗೆ ಕಳುಹಿಸುತ್ತೀರಿ ಎಂದರೆ ಇದು ಕಷ್ಟದ ಕೆಲಸ. ಆದೇ ಜಿಲ್ಲೆಯಲ್ಲಿ ಏತಕ್ಕೆ ಕೊಡುವುದಕ್ಕಾಗುವುದಿಲ್ಲ? ಎಲ್ಲಾ ಜಿಲ್ಲೆಗಳಲ್ಲಿ ಬಡವರೇ ಹೆಚ್ಚಾಗಿ ಈ ಟಿ.ಸಿ.ಹೆಚ್.ಗೆ ಹೋಗುವಂಥದ್ದು ಇದೆ. ಅವರಿಗೆ ಇದರಿಂದ ಅನುಕೂಲವಾಗುತ್ತದೆ. ಮಾರ್ಕ್ಸ್ ಕಡಿಮೆ ತೆಗೆದುಕೊಂಡ ಎಂಬ ಕಾರಣಕ್ಕಾಗಿ ದೂರದ ಜಿಲ್ಲೆಗೆ ಅವನನ್ನು ಕಳುಹಿಸಿದರೆ ಡಬಲ್ ಪನಿಷ್‌ಮೆಂಟ್ ಕೊಟ್ಟ ಹಾಗೆ ಆಗುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಹೆಚ್ಚು ವಿದ್ಯಾರ್ಥಿಗಳು ಬಂದಾಗ ನಮ್ಮ ಸರ್ಕಾರಿ ಶಾಲೆಗಳಲ್ಲಿ ಮತ್ತು ಏಡೆಡ್ ಶಾಲೆಗಳಲ್ಲಿ ಇನ್‌ಟೇಕ್ ಕಡಿಮೆ ಇದ್ದಾಗ ಅಲ್ಲಿ ಅಕಾಮಡೇಟ್ ಮಾಡುವುದಕ್ಕಾಗುವುದಿಲ್ಲ ಆದ ಕಾರಣ ಅವರುಗಳನ್ನು ಹೊರಗೆ ಕಳುಹಿಸಬೇಕಾಗುತ್ತದೆ.

ಅಧ್ಯಕ್ಷರು:- ಕಡಿಮೆ ಮಾರ್ಕ್ಸ್ ಇದ್ದವರಿಗೆ ದೂರ ಕಳುಹಿಸುವುದು ಎಂದು ಅರ್ಥ ಅಲ್ಲ. ಸೀಟ್ಸ್ ಕಡಿಮೆ ಇರುತ್ತದೆ, ಸೀಟ್ ಕೇಳತಕ್ಕಂಥ ಅಭ್ಯಾರ್ಥಿಗಳು ಹೆಚ್ಚು ಇರುತ್ತಾರೆ, ಹೆಚ್ಚು ಮಾರ್ಕ್ಸ್ ಬಂದವರಿಗೆ ಮೆರಿಟ್ ಮೇಲೆ ಕೊಡುತ್ತಾರೆ. ಅವರಿಗೆ ಅವರು ಕೇಳಿದಲ್ಲೆ ಸೀಟು ಸಿಗುತ್ತದೆ. ಕಡಿಮೆ ಅಂಕ ಪಡೆದವರಿಗೆ ಅವರು ಅಪೇಕ್ಷೆ ಪಟ್ಟಲ್ಲಿ ಸೀಟು ಸಿಗುವುದಿಲ್ಲ. That is the principle.

ಶ್ರೀ ಅರಗ ಜ್ಞಾನೇಂದ್ರ:- ಈ ಟಿ.ಸಿ.ಹೆಚ್. ಸೀಟು ಅಲಾಟ್ ಮಾಡುವಾಗ ಗಣಿತ ಮತ್ತು ವಿಜ್ಞಾನ ವಿಭಾಗದಲ್ಲಿ ಮಿಡ್ಲ್‌ಸ್ಕೂಲ್‌ನಲ್ಲಿ ಟೀಚರ್ಸ್ ಇಲ್ಲದ ಕಾರಣ ಪಾಠ ಮಾಡುವುದು ಬಹಳ ಕಷ್ಟವಾಗಿದೆ. ಹಾಗಾಗಿ ಪಿ.ಯು.ಸಿ.ನಲ್ಲಿ ಸೈನ್ಸ್ ಮತ್ತು ಗಣಿತ ವಿಭಾಗವನ್ನು ತೆಗೆದುಕೊಂಡವರಿಗೆ ಟಿ.ಸಿ.ಹೆಚ್. ಸೀಟ್ ಅಲಾಟ್‌ಮೆಂಟ್‌ನಲ್ಲಿ ಏನಾದರೂ ಪ್ರತ್ಯೇಕ ವ್ಯವಸ್ಥೆ ಇರುತ್ತದೆಯೇ? ಅದನ್ನು ಏನಾದರೂ ನೀವು ಮಾಡುತ್ತಿದ್ದೀರಾ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಸೀಟ್ ಅಲಾಟ್‌ಮೆಂಟ್ ಬೇರೆ ಯಾವುದೇ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಟಿ.ಸಿ.ಹೆಚ್. ಕೂಡಬೇಕಾದರೆ ಏನೇನು ಕ್ವಾಲಿಫಿಕೇಷನ್ ಬೇಕೋ ಆ ಕ್ವಾಲಿಫಿಕೇಷನ್ ಇದ್ದವರಿಗೆ ಮಾತ್ರ ಸೀಟು ಕೊಡತಕ್ಕಂಥ ವ್ಯವಸ್ಥೆ ಮಾಡು-

ತ್ತೇವೆ. ಪೋಸ್ಟಿಂಗ್ಸ್ ಟೈಮ್‌ನಲ್ಲಿ ಉತ್ತೀರ್ಣರಾದವರಿಗೆ ಅವಶ್ಯಕತೆ ಎಲ್ಲಿ ಇದೆ ಅದನ್ನು ನೋಡಿ-ಕೊಂಡು ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ:- ಸೈನ್ಸ್ ಮತ್ತು ಮ್ಯಾಥ್ಸ್‌ಗೆ ಏನಾದರೂ ಪ್ರತ್ಯೇಕ ಕೋಟಾ ಫಿಕ್ಸ್ ಮಾಡಿದರೆ ಮಿಡ್ಲ್‌ಸ್ಕೂಲ್ ಮತ್ತು ಪ್ರೈಮರಿ ಶಾಲೆಯಲ್ಲಿ ಸೈನ್ಸ್ ಮತ್ತು ಮ್ಯಾಥ್ಸ್ ಟೀಚ್ ಮಾಡುವುದಕ್ಕೆ ಅವರಿಗೆ ಅನುಕೂಲವಾಗುತ್ತದೆ. ಏಕೆಂದರೆ ಆರ್ಟ್ಸ್ ತೆಗೆದುಕೊಂಡವರು ಗಣಿತ ಸೈನ್ಸ್ ಟೀಚ್ ಮಾಡುವುದಕ್ಕೆ ಬರುವುದಿಲ್ಲ. ಇವೊತ್ತು ಮಿಡ್ಲ್‌ಸ್ಕೂಲ್‌ನಲ್ಲಿರತಕ್ಕಂಥ ಗಣಿತವನ್ನು ಬಿ.ಎಸ್‌ಸ್ಸಿ.ನಲ್ಲಿ ಗಣಿತವನ್ನು ಅಭ್ಯಾಸ ಮಾಡಿದವರೂ ಸಹ ಟೀಚ್ ಮಾಡುವಂಥದ್ದು ಬಹಳ ಕಷ್ಟವಾಗಿದೆ. ಈ ರೀತಿಯ ಒಂದು ಪೋರ್ಷನ್ಸ್ ಬಂದಿದೆ. ಇದು ತುಂಬಾ ಕಠಿಣವಾಗಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು:- ಈ ಟಿ.ಸಿ.ಹೆಚ್. ನೇಮಕಾತಿಯಲ್ಲಿ ಮೀಸಲಾತಿ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೇಮಕಾತಿ ಮಾಡಿಕೊಳ್ಳದಿರುವುದು ನನ್ನ ಗಮನಕ್ಕೆ ಬಂದಿದೆ. ಇದು ಸರಿಯೇ? ಅದರ ಪ್ರಕಾರ ನೇಮಕಾತಿ ಮಾಡಿಕೊಳ್ಳಲಿಲ್ಲ ಅಂದರೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ?

ಅಧ್ಯಕ್ಷರು:- ಅಂತಹ ಪ್ರಸಂಗ ತಮ್ಮ ಗಮನಕ್ಕೆ ಬಂದಿದ್ದರೆ, ಸಚಿವರಿಗೆ ಕೊಟ್ಟುಬಿಡಿ; ಖಂಡಿತ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಅಂಥದ್ದೇನಾದರೂ ತಮ್ಮ ಗಮನಕ್ಕೆ ಬಂದಿದ್ದರೆ, ನನಗೆ ಕೊಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಮಂಜುನಾಥ್ ಕುನ್ನೂರ್‌ರವರೇ, ತಾವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾ-ಯತ್ ರಾಜ್ ಇಲಾಖೆಗೆ ಕೇಳಿರುವ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಯಾಗಿದೆ-ಯಲ್ಲಾ.

ಶ್ರೀ ಮಂಜುನಾಥ್ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆ ಎಂದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸು-ವರೇ? "ಧಾರವಾಡ ಜಿಲ್ಲಾ ಶಿಗ್ಗಾಂವ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಿಂದ 1995-96ರಲ್ಲಿ ವಿವಿಧ ಯೋಜನೆಯಡಿ ಮಾಡಿದ ಕೆಲಸಗಳು ಯಾವುವು? ಅದಕ್ಕೆ ತಗಲಿದ ಖರ್ಚು ಎಷ್ಟು? ಸದರಿ ಕಾಮಗಾರಿಯಗಳಲ್ಲಿ ಕಳಪೆ ಕಾಮಗಾರಿಗಳಾಗಿವೆಯೆಂದು ಹಾಗೂ ಸಾಕಷ್ಟು ಹಣ ಲೋಪ ಆಗಿದೆಯೆಂದು ಸಾರ್ವಜನಿಕರಿಂದ ದೂರುಗಳು ಬಂದಿವೆಯೇ?" ಈ ಪ್ರಶ್ನೆ ಮೇಲ್ನೋಟಕ್ಕೆ ನೋಡಿದರೆ ಇದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಬರುತ್ತದೆ ಎಂಬುದು ಗೊತ್ತಾಗುತ್ತದೆ. ಆದರೆ ಇವೊತ್ತು ಆ ಇಂಜಿನಿಯರಿಂಗ್ ಉಪವಿಭಾಗದಲ್ಲಿ ಆಗಿರತಕ್ಕಂಥ ಕಳಪೆ

ಕಾಮಗಾರಿಗಳನ್ನು ಬಚ್ಚಿಡುವುದಕ್ಕಾಗಿ ಸರ್ಕಾರ ಉತ್ತರ ಕೊಟ್ಟಿಲ್ಲ. ಆದ್ದರಿಂದ ಉದ್ದೇಶಪೂರ್ವಕವಾಗಿ ಲೋಕೋಪಯೋಗಿ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ತಮಗೆ ಹೇಳಲಿಚ್ಛಿಸುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೇ, ತಾವು ನನ್ನ ರಕ್ಷಣೆಗೆ ಬರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾಲ್ಲೂಕು ಪಂಚಾಯತ್ ಕಳಪೆ ಕೆಲಸದ ಬಗ್ಗೆ ಅವರ ಬಗ್ಗೆ ಸಬ್ ಡಿವಿಜನ್‌ನಲ್ಲಿ ಆಗಿದ್ದುದು ಮಾತ್ರ ಕೇಳಿದ್ದಾರೆ. ಲೋಕೋಪಯೋಗಿ ಇಲಾಖೆಯ ಕೆಲಸದ ಬಗ್ಗೆ ಅವರು ಕೇಳಲಿಲ್ಲ. ಅದನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ನಮ್ಮ ಸರ್ಕಾರದಿಂದ ಬಂದಿರತಕ್ಕಂಥ ದಿನಾಂಕ 19.11.1991ರ ಸುತ್ತೋಲೆಯ ವಿಚಾರವನ್ನು ಪರಿಗಣಿಸಿ ಇದನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ಬೆಂಡಿಗೇರಿ ಗ್ರಾಮದ ಬಗ್ಗೆ ವಿಚಾರ ಬಂದಾಗ ಬಹುಶಃ ಇದನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಿರಬಹುದು ಎಂದು ನಾನು ಭಾವಿಸುತ್ತೇನೆ. ಸುತ್ತೋಲೆ ವಿಚಾರದಲ್ಲಿ ತಪ್ಪಾಗಿದೆ.

ಅಧ್ಯಕ್ಷರು:- ಇದರ ಉತ್ತರ ನಾಳೆ ತರಿಸಿಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಈ ಸುತ್ತೋಲೆಯ ವಿಚಾರ ಇಟ್ಟುಕೊಂಡು ಈ ತರಹ ವರ್ಗಾವಣೆಯಾಗಿದೆ; ಇದಕ್ಕೆ ಸರಿಯಾದ ಉತ್ತರವನ್ನು ನಾಳೆ ಕೊಡುತ್ತೇನೆ.

ಡಾ।। ಎಂ.ಪಿ. ಕರ್ಕಿ:- ಆ ಸುತ್ತೋಲೆ ಯಾವುದು ಇದೆ ಅದನ್ನು ಸ್ವಲ್ಪ ಓದಿ ಹೇಳಿ.

Sri. M.P. Prakash:- I will read it. It is as follows:-

"In the G.O. . . dated 26/12/1987 from the Chief Secretary to the Government of Karnataka addressed to the Secretary, Karnataka Legislature Secretariat, it was indicated that the Rural Development and Panchayat Raj Department would be the nodal Department for obtaining the replies from the Zilla Parishads and furnishing relevant information to the Petitions Committee in respect of all matters pertaining to the Zilla Panchayats including Mandal Panchayats. It was further laid down that the matter involving inter-departmental co-ordination policy or organisations of the Panchayat Raj and the Officer-bearers, the Secretary, Rural Development and Panchayat Department would be the concerned Administrative Secretary. However, with regard to answering questions raised in the Houses of Legislature on the substantive matters relating to

the schemes and works of the Zilla Panchayats and Mandal Panchayats this will continue to be the responsibility of the Administrative Secretaries. Heads of the Departments concerned and the relevant questions will be referred to those Secretaries for furnishing replies to the Legislature. Referring to a case of furnishing replies to the Estimates Committee of the Legislature the Chief Secretary to Government of Karnataka, in his letter dated 23.10.1991 addressed to the Secretary, Karnataka Legislature Secretariat, has again clarified that the responsibility to furnish replies to Legislature Committees and to give evidence before them on substantive matters relating to the schemes and works on the ZPs and MPs which have been transferred to those bodies would continue to be that of the Secretaries to the Government of the respective departments and that the Rural Development and Panchayat Raj Department is not the modal Deparment in this respect. A copy of the above G.O. letter dated 23/10/1991 was also endorsed to all the Secretaries to Government for reference and for issuance of needful instructions to the field Deparments coming under their control and guidelines etc.."

ಈ ಕಾರಣದಿಂದ ತಪ್ಪಾಗಿ ವರ್ಗಾಯಿಸಿದ್ದಾರೆ, ನಾಳೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು:- ದುರುದ್ದೇಶ ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರ ಕಾರ್ಯದರ್ಶಿಗಳು ಇಷ್ಯೂ ಮಾಡುವ ಸರ್ಕಾರಿ ಆದೇಶದಲ್ಲೇ ಅವರಿಗೆ ಇಷ್ಟು ಕನ್‌ಫ್ಯೂಷನ್ ಆದರೆ ಕೆಲಸ ಇಂಪ್ಲಿಮೆಂಟ್ ಮಾಡುವಾಗ ಎಷ್ಟು ಕಷ್ಟವಾಗುತ್ತದೆ. ನೀವೇ ಲೆಕ್ಕ ಹಾಕಿಕೊಳ್ಳಿ.

ವಿಷಯ:- ರಾಜ್ಯದಲ್ಲಿ ಮೆದುಳುಜ್ವರದ ಪ್ರಕರಣಗಳು.

333(2327) **ಶ್ರೀ ಜಗದೀಶ್ ಶೆಟ್ಟರ (ಹುಬ್ಬಳ್ಳಿ ಗ್ರಾಮಾಂತರ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮೆದುಳು ಜ್ವರದ ಎಷ್ಟು ಪ್ರಕರಣಗಳು ದಾಖಲಾಗಿವೆ? ಈ ರೋಗ ಹರಡಲು ಕಾರಣಗಳೇನು? ಈ ರೋಗ ನಿಯಂತ್ರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ॥ ಹೆಚ್.ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಆ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮೆದುಳುಜ್ವರ ವರದಿಯಾದ ಪ್ರಕರಣಗಳ ವಿವರ ಈ ರೀತಿ ಇದೆ.

	ಸಂಶಯಾಸ್ಪದ ಪ್ರಕರಣ		ದೃಢಪಟ್ಟ ಪ್ರಕರಣ	
	ಹರಡಿದ್ದು	ಮರಣಿಸಿದ್ದು	ಹರಡಿದ್ದು	ಮರಣಿಸಿದ್ದು
1994	125	47	25	5
1995	329	102	62	15
1996	4	3	-	-

(ಜೂನ್‌ವರೆಗೆ)

ಈ ಖಾಯಿಲೆಯು ಕ್ಯೂಲೆಕ್ಸ್ ಎಂಬ ಒಂದು ಜಾತಿಯ ಸೊಳ್ಳೆಗಳಿಂದ ಹರಡುವ ಸೋಂಕು ರೋಗ. ಈ ಸೋಂಕು ಒಂದು ರೀತಿಯ ವಿಷಾಣು (ವೈರಸ್)ಗಳಿಂದ ಹರಡುತ್ತದೆ. ಈ ವಿಷಾಣುಗಳು ಹೆಚ್ಚಾಗಿ ಹಂದಿಗಳ ದೇಹದಲ್ಲಿ ಇರುವುದು ಕಂಡು ಬಂದಿರುತ್ತದೆ. ಸೋಂಕಿರುವ ಹಂದಿಗಳನ್ನು ಕಚ್ಚಿದ ಸೊಳ್ಳೆಗಳು ಮನುಷ್ಯನನ್ನು ಕಚ್ಚಿದಾಗ ಈ ಸೋಂಕು ಸ್ವಾಭಾವಿಕವಾಗಿ ತಗಲುತ್ತದೆ. ಈ ಸೋಂಕಿಗೆ ಹೆಚ್ಚಾಗಿ ಮಕ್ಕಳೇ ಬಲಿಯಾಗುತ್ತವೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಹಬ್ಬುವಂತಹ ರೋಗವಲ್ಲ. ಈ ಖಾಯಿಲೆಯು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಬಳ್ಳಾರಿ, ಮಂಡ್ಯ, ಕೋಲಾರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಬಂದಿರುವ ಬಗ್ಗೆ ವರದಿಯಾಗಿರುತ್ತದೆ.

ಈ ರೋಗ ನಿಯಂತ್ರಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:-

1. ಈ ಖಾಯಿಲೆಯು ಹರಡದಂತೆ ಸೊಳ್ಳೆಗಳ ನಿಯಂತ್ರಣಕ್ಕಾಗಿ ಕೀಟನಾಶಕ ಸಿಂಪಡಣೆ ಕೈಗೊಳ್ಳಲಾಗಿದೆ.
2. ತಾಂತ್ರಿಕ ಮೆಲಾಥಿಯಾನ್ ಎಂಬ ಕೀಟನಾಶಕ ದ್ರಾವಣವನ್ನು ಫಾಗಿಂಗ್ ಮೂಲಕ ಹರಡಿ ಸೊಳ್ಳೆಗಳನ್ನು ನಿಯಂತ್ರಿಸಲಾಗುತ್ತಿದೆ.
3. ಜನತೆಗೆ ಈ ಖಾಯಿಲೆಯ ಬಗ್ಗೆ ಹಾಗೂ ನಿಯಂತ್ರಣ ಕ್ರಮದ ಬಗ್ಗೆ ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತದೆ.
4. ಚಿಹ್ನೆಗಳಿಗನುಸಾರ ಚಿಕಿತ್ಸೆ ನೀಡಲಾಗುತ್ತಿದೆ.
5. ಮೆದುಳು ರೋಗ ಹೆಚ್ಚಾಗಿ ಇರುವ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಕಷ್ಟು ಔಷಧಿಯನ್ನು ಚಿಕಿತ್ಸೆಗಾಗಿ ಸರಬರಾಜು ಮಾಡಲಾಗಿದೆ.
6. 1995ರಲ್ಲಿ ಕೇಂದ್ರ ಸರ್ಕಾರದಿಂದ 1.25 ಮೆಟ್ರಿಕ್ ಟನ್ ತಾಂತ್ರಿಕ ಮೆಲಾಥಿಯಾನ್ ಅನ್ನು ಮೆದುಳು ಜ್ವರ ನಿಯಂತ್ರಣ ಕಾರ್ಯಕ್ರಮಕ್ಕಾಗಿ ರೋಗ ಪೀಡಿತ ಜಿಲ್ಲೆಗಳಿಗೆ ಸರಬರಾಜಾಗಿರುತ್ತದೆ.

7. 1995ರಲ್ಲಿ ರೋಗಗ್ರಸ್ಥ 152 ಹಳ್ಳಿಗಳಲ್ಲಿ 7821 ಮನೆಗಳಿಗೆ ಕೀಟನಾಶಕ ಸಿಂಪಡಣಾ ಕಾರ್ಯ ಕೈಗೊಳ್ಳಲಾಗಿದೆ. ಹಾಗೂ 1844 ಮಕ್ಕಳಿಗೆ ರೋಗನಿರೋಧಕ ಲಸಿಕೆಯನ್ನು ನೀಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮೆದುಳು ಜ್ವರಕ್ಕೆ ಕಾರಣವೇನೆಂದರೆ ಈ ಖಾಯಿಲೆಯು ಕ್ಯೂಲಿಕ್ಸ್ ಎಂಬ ಒಂದು ಜಾತಿಯ ಸೊಳ್ಳೆಗಳಿಂದ ಹರಡುವ ಸೋಂಕು ರೋಗ. ಈ ಸೋಂಕು ಒಂದು ರೀತಿಯ ವಿಷಾಣುಗಳಿಂದ ಹರಡುತ್ತದೆ. ಈ ವಿಷಾಣುಗಳು ಹೆಚ್ಚಾಗಿ ಹಂದಿಗಳ ದೇಹದಲ್ಲಿ ಇರುವುದು ಕಂಡು ಬಂದಿರುತ್ತದೆ. ಸೋಂಕಿರುವ ಹಂದಿಗಳನ್ನು ಕಚ್ಚಿದ ಸೊಳ್ಳೆಗಳು ಮನುಷ್ಯನನ್ನು ಕಚ್ಚಿದಾಗ ಈ ಸೋಂಕು ಸ್ವಾಭಾವಿಕವಾಗಿ ತಗಲುತ್ತದೆ. ಈ ಸೋಂಕಿಗೆ ಹೆಚ್ಚಾಗಿ ಮಕ್ಕಳೇ ಬಲಿಯಾಗುತ್ತಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ಇವೊತ್ತು ನಮ್ಮ ಹುಬ್ಬಳ್ಳಿ ಧಾರವಾಡ ಹಾಗೂ ರಾಜ್ಯದ ನಗರಪ್ರದೇಶಗಳಲ್ಲಿ ಹಂದಿಗಳು ಬೇಕಾದಲ್ಲಿ, ಬೇಕಾದ ಬಡಾವಣೆಗಳಲ್ಲಿ ತಮ್ಮ ಮನಸ್ಸಿನ ಇಚ್ಛೆಯಂತೆ ಅಡ್ಡಾಡುತ್ತಿವೆ. ಇವೊತ್ತು ಆ ಹಂದಿಗಳ ಮಾಲೀಕರ ಮೇಲೆ ನಿಯಂತ್ರಣ ಇಟ್ಟುಕೊಳ್ಳುವುದರಲ್ಲಿ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಈ ಹಂದಿಗಳ ಕಾಟ ಅದರಲ್ಲೂ ಮಹಾನಗರದಲ್ಲಿ ಬಹಳ ಹೆಚ್ಚಾಗಿದೆ. ಒಂದೊಂದು ಓಣಿಯಲ್ಲಿ ಸುಮಾರು ಹತ್ತು ಹದಿನೈದು ಹಂದಿಗಳು ಇರುತ್ತವೆ. ಹೀಗಾಗಿ ಅದರಿಂದ ಚಿಕ್ಕ ಮಕ್ಕಳಿಗೆ ಈ ರೋಗ ಹರಡುವಲ್ಲಿ ಕಾರಣೀಕರ್ತವಾಗಿದೆ. ನಾನು ಹಲವಾರು ಸಾರಿ ಈ ಪ್ರಶ್ನೆಯನ್ನು ಕೇಳಿದಾಗ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ತೆಗೆದುಕೊಳ್ಳಲಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದರೆ ಉತ್ತರದಲ್ಲಿ ಏನು ಹೇಳಿಲ್ಲ. ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಕ್ಕೆ ಹಲವಾರು ಕಾರ್ಯಕ್ರಮಗಳ ಬಗ್ಗೆ ಹೇಳಿದ್ದಾರೆ. ಆದರೆ ಹಂದಿಗಳ ಕಾರ್ಯಕ್ರಮದ ಬಗ್ಗೆ ಏನೂ ಹೇಳಲಿಲ್ಲ. ಆ ಹಂದಿಗಳ ಕಾಟದ ಬಗ್ಗೆ ಕೂಡ ಹೇಳಿ.

ಡಾ॥ ಹೆಚ್.ಸಿ. ಮಹಾದೇವಪ್ಪ:- ಮಾನ್ಯ ಸಭಾಧ್ಯಕ್ಷರೇ, ಮೆದುಳು ಜ್ವರ ರೋಗ ಹರಡಲಿಕ್ಕೆ ಹಂದಿ ಕಾರಣ. Pig is an intermidiate host, mosquito, pig and man. ಸೈಕಲ್ ಈ ರೀತಿಯಲ್ಲಿರುತ್ತದೆ. ಈ ರೀತಿಯಾದಂಥ ಸಂದರ್ಭದಲ್ಲಿ ಕೋಲಾರ, ರಾಯಚೂರು ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ಒಂದು ರೋಗ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸುತ್ತಿದೆ. ಮೂಲತಃ ಸೋಂಕು ತಗಲಿದ ಹಂದಿಯಿಂದ ಇದು ಮಕ್ಕಳಿಗೆ ತಗಲುತ್ತದೆ. ಹಂದಿ ರೈತರಿಗೆ ಒಂದು ಲಾಭದಾಯಕವಾದ ಆರ್ಥಿಕವಾದ ಶಕ್ತಿಯನ್ನು ಕೊಡತಕ್ಕಂಥ ವಿಚಾರವಾದರೂ ಕೂಡ ಪ್ರಾಣವನ್ನು ಸಂರಕ್ಷಣೆ ಮಾಡುವಂಥ ವಿಚಾರದಲ್ಲಿ ಈ ರೋಗಪೀಡಿತ ಹಂದಿಗಳನ್ನು ಜನ ನಿಬಿಡದಿಂದ ಸುಮಾರು ಮೂರು ಕಿ.ಮೀ. ಆಚೆ ಇಡಲಿಕ್ಕೆ ನಾವು ಆಗಾಗ್ಗೆ ಜನತೆಗೆ ಹೇಳುತ್ತಿದ್ದೇವೆ. ಸಾಮಾನ್ಯವಾಗಿ ಏಪ್ರಿಲ್, ಮೇ, ಜೂನ್ ಮತ್ತು ಆಕ್ಟೋಬರ್, ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಈ ಖಾಯಿಲೆ ಬರುತ್ತಿದ್ದು, ಇದರ ಸಲುವಾಗಿ ಹಂದಿಗಳ ನಿಯಂತ್ರಣ ಮಾಡುವುದರ ಜೊತೆಗೆ ಕಾರ್ಪೋರೇಷನ್ ಮತ್ತು ಪುರ-